


ಯುವರ್ ಫಸ್ಟ್ ಮೂವ್ ದೇರ್ ಲಾಸ್ಟ್ ಮೂವ್



#BetweenArtandQuarantine ಕ್ವಾರಂಟೈನ್ ಕಾಲದಲ್ಲಿ ಕಲೆ

### #BetweenArtandQuarantine (ಕ್ವಾರಂಟೈನ್ ಕಲೆ)

ಜನಪ್ರಿಯ ಕಲಾಕೃತಿಗಳು, ಮ್ಯೂಸಿಯಂಗಳಲ್ಲಿರುವ ಚಿತ್ರಪಟಗಳು, ಶಿಲ್ಪಗಳನ್ನು ಆಶಯವಾಗಿ ಇರಿಸಿಕೊಂಡು ಅದನ್ನು ಕ್ವಾರಂಟೈನ್ ಕಾಲಕ್ಕೆ ತಕ್ಕಂತೆ ಮಾರ್ಪಡಿಸಿಕೊಂಡು ಕಲಾಕೃತಿಯ ಜೊತೆಗೆ ಫೋಟೊ ಹಾಕುವ ಚಾಲೆಂಜ್ ಇದು. ಹಿಂದಿನ ಕಾಲದ ಕಲಾಕೃತಿಯಲ್ಲಿ ಹಣ್ಣು, ಚಿನ್ನದ ಆಭರಣಗಳು, ಪವಿತ್ರ ಗ್ರಂಥಗಳು ಇದ್ದರೆ ಇದರಲ್ಲಿ ಪಾಲ್ಗೊಳ್ಳುವವರು ಟಾಯ್ಲೆಟ್ ಪೇಪರ್, ಪೆಪ್ಸಿ ಟಿನ್, ಹಳೇ ಚಿಂದಿ ಬಟ್ಟೆಗಳನ್ನು ಬಳಸಿ ಚಾಲೆಂಜ್‌ನಲ್ಲಿ ಭಾಗವಹಿಸಿದ್ದರು. ಇನ್‌ಸ್ಟಾಗ್ರಾಂನಲ್ಲಿಯೇ ಈ ಚಾಲೆಂಜ್ ಹೆಚ್ಚು ಚಾಲ್ತಿಯಲ್ಲಿತ್ತು. @tussenkunstenquarantaine ಇನ್‌ಸ್ಟಾಗ್ರಾಂ ಅಕೌಂಟ್‌ನಲ್ಲಿ ಈ ಚಾಲೆಂಜ್‌ನ ಸಾಕಷ್ಟು ಪ್ರಯೋಗಗಳನ್ನು ಗಮನಿಸಬಹುದು. ಹಲವು ಕಲಾವಿದರು ಈ ಚಾಲೆಂಜ್ ಸ್ವೀಕರಿಸಿದ್ದು ವಿಶೇಷ. #tussenkunstenquarantaine ಮತ್ತು #betweenartandquarantine ಹ್ಯಾಷ್‌ಟ್ಯಾಗ್ ಬಳಸಿ ಸಾಕಷ್ಟು ಜನರು ಚಿತ್ರಗಳನ್ನು ಹಂಚಿಕೊಂಡಿದ್ದರು.

### Your First Move Is Their Last Move

ಮನೆಗಳನ್ನು ಡಾನ್ಸ್‌ಕ್ಲಬ್‌ಗಳಾಗಿ ಮಾರ್ಪಡಿಸಿದ ಚಾಲೆಂಜ್ ಇದು. ಕುಟುಂಬದ ಎಲ್ಲರೂ ಕ್ಯಾಮೆರಾ ಮುಂದೆ ಬಂದು ಡಾನ್ಸ್ ಮಾಡಬೇಕು. ಕ್ಯಾಮೆರಾ ಮುಂದೆ ಡಾನ್ಸ್ ಮಾಡುತ್ತಿರುವವರ ಕೊನೆಯ ನಡೆ (ಮೂವ್) ನಂತರ ಬರುವ ಮೊದಲ ನಡೆ ಆಗಬೇಕು. ಟಿಕ್‌ಟಾಕ್‌ನಲ್ಲಿ ಇದು ಹುಟ್ಟಿಬ್ಬಿಸಿತ್ತು. ಇಂದಿಗೂ ಹೊಸಹೊಸ ವಿಡಿಯೊಗಳು ಕಾಣಿಸಿಕೊಳ್ಳುತ್ತಲೇ ಇವೆ.

### until tomorrow

ಇನ್‌ಸ್ಟಾಗ್ರಾಂನಲ್ಲಿ ಇದು ಕ್ರಿಪ್ಟಿಕ್ ಕ್ಯಾಪ್ಷನ್. ಈ ಕ್ಯಾಪ್ಷನ್ ಬಳಸಿ ಹಾಕುವ ಚಿತ್ರಗಳು ಒಂದು ದಿನದ ಅವಧಿಗೆ ಇನ್‌ಸ್ಟಾಗ್ರಾಂನಲ್ಲಿ ಉಳಿಯುತ್ತವೆ. ಯಾರೇ ಲೈಕ್ ಮಾಡಿದರೂ ಅವರಿಗೆ ನೀವೂ ಇಂಥದ್ದೊಂದು ಚಿತ್ರ ಹಾಕಿ ಎಂಬ ಸಂದೇಶ ಬರುತ್ತಿತ್ತು. ಯುವಜನತೆ ಹೆಚ್ಚಿನ ಸಂಖ್ಯೆಯಲ್ಲಿ ಈ ಸವಾಲು ಸ್ವೀಕರಿಸಿದ್ದರು.




ಇತರರು ಗುರುತಿಸಲಿ, ಆ ಮೂಲಕ ನಾನೊಬ್ಬ ಅಭಿಪ್ರಾಯಗಳನ್ನು ಪ್ರಭಾವಿಸುವ ಒಪೀನಿಯನ್ ಲೀಡರ್ ಆಗಬೇಕು ಎನ್ನುವ ಆಸೆಯೂ ಇಣುಕಿರುತ್ತದೆ.

ಇನ್ನೂ ಕೆಲವರು ತಮ್ಮ ಆಸೆ ಮತ್ತು ಸಾಮರ್ಥ್ಯಗಳನ್ನು ಸಾರಿ ಹೇಳುತ್ತಾ ತಮ್ಮಂತೆ ಇರುವವರನ್ನು ಹುಡುಕುತ್ತಿರುತ್ತಾರೆ. ಅಂಥವರೊಂದಿಗೆ ಬೆರೆಯುವ (ಸೋಷಿಯಲೈಸ್) ಉದ್ದೇಶದಿಂದಲೂ ಸೋಷಿಯಲ್ ಮೀಡಿಯಾ ಕಟ್ಟೆಯಲ್ಲಿ ವಿಹರಿಸುತ್ತಿರುತ್ತಾರೆ. ಸೋಷಿಯಲ್ ಪರಿಣಿತರು ಇನ್ನೂ ಸಾಕಷ್ಟು ಕಾರಣಗಳನ್ನು ಹೇಳುತ್ತಾರಾದರೂ ಅವೆಲ್ಲವನ್ನೂ ಸ್ಥೂಲವಾಗಿ ರೆಕಗ್ನಿಶನ್, ಬ್ರಾಂಡಿಂಗ್ ಸೋಷಿಯಲೈಸ್ ವ್ಯಾಪ್ತಿಯಲ್ಲಿ ಧಾರಾಳವಾಗಿ ವಿಂಗಡಿಸಬಹುದಾಗಿದೆ.

### ಯಾರಿಗೆ ಯಾವುದು?

ಎಲ್ಲಾ ಸೋಷಿಯಲ್ ಮೀಡಿಯಾಗಳನ್ನೂ ಒಂದೇ ತಕ್ಕಡಿಯಲ್ಲಿಟ್ಟು ತೂಗಲು ಆಗುವುದಿಲ್ಲ. ಪ್ರತಿಯೊಂದರ ಉದ್ದೇಶ, ಗುಣ, ಸ್ವಭಾವ ಮತ್ತು ಮಾರುಕಟ್ಟೆ ತಂತ್ರ ಬೇರೆ. ಪ್ರತಿ ಸೋಷಿಯಲ್ ಮೀಡಿಯಾದ ಟಾರ್ಗೆಟ್ ಏಜ್ ಗ್ರೂಪ್ ಸಹ ಭಿನ್ನ.

ಗೂಗಲ್ ಪ್ಲೇಸ್ಟೋರ್‌ನಲ್ಲಿ ಮೇ 1ರ ಬೆಳಿಗ್ಗೆ 6.30 ಲಭ್ಯವಿದ್ದ ಮಾಹಿತಿ ಪ್ರಕಾರ ಫೇಸ್‌ಬುಕ್ 500 ಕೋಟಿ, ಇನ್‌ಸ್ಟಾಗ್ರಾಂ 100 ಕೋಟಿ, ಟಿಕ್‌ಟಾಕ್ 100 ಕೋಟಿ, ಹೆಲೊ 10 ಕೋಟಿ, ಟ್ವಿಟರ್ 5 ಕೋಟಿ, ಶೇರ್‌ಚಾಟ್ 1 ಕೋಟಿ ಮೊಬೈಲ್‌ಗಳಿಗೆ ಇಳಿದಿವೆ. ಸೋಷಿಯಲ್ ಮೀಡಿಯಾದಲ್ಲಿ ಫೇಸ್‌ಬುಕ್‌ನ ಮಾರುಕಟ್ಟೆ ಪಾಲು ದೊಡ್ಡಮಟ್ಟದಲ್ಲಿದ್ದರೂ ಯುವಜನರು ಅದರಿಂದ ವಿಮುಖರಾಗುತ್ತಿದ್ದಾರೆ ಎಂಬ ಅಭಿಪ್ರಾಯ ಪ್ರಬಲವಾಗುತ್ತಿದೆ.

'ಫೇಸ್‌ಬುಕ್ ಹೆಚ್ಚು ಬಳಸುವವರ ಸರಾಸರಿ ವಯಸ್ಸು 35 ವರ್ಷ. ಅದರಲ್ಲಿ ಕುಟುಂಬಕ್ಕೆ